ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಇದೆ.

ಆ) ಈಗಾಗಲೇ ಇದಕ್ಕಾಗಿ ಭೂಸ್ವಾಧೀನ ನಡವಳಿ ಪ್ರಾರಂಭವಾಗಿದ್ದು, ಮುಂದಿನ ನಡವಳಿಗಳು ನಡೆಯುತ್ತಿದೆ.

ವಿಷಯ:- ಹುಣಸೂರಿನಲ್ಲಿ ಹಿಂದುಳಿದ ವರ್ಗಗಳ ಕಾಲೇಜು ವಿದ್ಯಾರ್ಥಿ ನಿಲಯಕ್ಕೆ ಹೊಸ ಕಟ್ಟಡ.

1413 (2253) **ಶ್ರೀ ವಿಜಯಶಂಕರ ಸಿ.ಹೆಚ್. (ಹುಣಸೂರು):-** ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಣಸೂರು ಪಟ್ಟಣದ ಹಿಂದುಳಿದ ವರ್ಗಗಳ ಕಾಲೇಜು ವಿದ್ಯಾರ್ಥಿ ನಿಲಯಕ್ಕೆ ಹೊಸದಾಗಿ ಕಟ್ಟಡ ಕಟ್ಟುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಈಗಾಗಲೇ ತಯಾರಿಸಿರುವ ಅಂದಾಜನ್ನು ಒಪ್ಪಿಗೆ ಕೊಡಲಾಗುವುದೇ?

ಇ) ಹಾಗಿದ್ದಲ್ಲಿ ಈ ಕಾಮಗಾರಿಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-

ಅ) ಹೌದು.

ಆ) ಉದ್ದೇಶಿತ ಕಟ್ಟಡದ ನಕ್ಷೆ ಮತ್ತು ಅಂದಾಜುಗಳನ್ನು ಕಳುಹಿಸಿಕೊಡಲು ಜಿಲ್ಲಾಧಿಕಾರಿಗಳನ್ನು ಕೋರಲಾಗಿದ್ದು, ಅವುಗಳನ್ನು ಪಡೆದ ನಂತರ ಪರಿಶೀಲಿಸಲಾಗುವುದು.

ಇ) ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಅಧ್ಯಕ್ಷರು:- ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. ನಾರಾಯಣಪುರ ಕೆನಾಲ್ ಬಗ್ಗೆ ನೋಟೀಸನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಅದಕ್ಕಿಂತ ಮುಂಚೆ ನಾನು ಅರ್ಧ ಗಂಟೆ ಕಾಲದ ಚರ್ಚೆಗೆ ಸಂಬಂಧಪಟ್ಟಂತೆ ಕೇಳಿದ್ದೆ. ಅಡ್ಜರ್ನ್‌ಮೆಂಟ್ ಮೋಷನ್ ವಿಚಾರವನ್ನು ತೆಗೆದುಕೊಳ್ಳುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು :- ಪ್ರಿಲಿಮಿನರಿ ಸಬ್ಮಿಷನೆ ಆದರೆ ಬೇಗ ಮುಗಿಸಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸನ್ನು ಕೊಡದೇ ಇದ್ದಾಗಲೂ ಕೂಡ, ಜೀರೋ ಅವರ್‌ನಲ್ಲಿ ಪ್ರಸ್ತಾಪ ಮಾಡಿರತಕ್ಕದ್ದು ಇದೆ. ಇವತ್ತು ಅಡ್ಮಿನಿಸ್ಟ್ರೇಷನ್ನೇ ಕೊಲ್ಯಾಪ್ಸ್ ಆಗುವಂಥ ಪರಿಸ್ಥಿತಿ ಇದೆ. ಆ ದೃಷ್ಟಿಯಿಂದ ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು:- ನಿನ್ನೆ ಏನಾಯಿತೆಂಬುದನ್ನು ಹೇಳುತ್ತೇನೆ. ತಾವು ನಿಲುವಳಿ ಸೂಚನೆಗೆ ನೋಟೀಸನ್ನು ಕೊಟ್ಟಿರಿ. ಪ್ರಶ್ನೋತ್ತರ ವೇಳೆ ಮುಗಿದಮೇಲೆ ನನಗಿರತಕ್ಕದ್ದು ಕೇವಲ ಎರಡೇ ಮಾರ್ಗ. ನಿಲುವಳಿ ಸೂಚನೆಗೆ ಅನುಮತಿ ನೀಡುವುದನ್ನು ನನ್ನ ಕಛೇರಿಯಲ್ಲೇ ತಡೆ ಹಿಡಿಯಬೇಕು, ಇಲ್ಲದಿದ್ದರೆ ಪ್ರಾಸ್ತಾವಿಕವಾಗಿ ಮನವಿ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಬೇಕು. ನಾರಾಯಣ ಪುರಕ್ಕೆ ಸಂಬಂಧಪಟ್ಟಂತೆ, ಮತ್ತು ಆಲಮಟ್ಟಿಗೆ ಸಂಬಂಧಪಟ್ಟಂತೆ ಎರಡನ್ನೂ ಸೇರಿಸಿ ಕೊಟ್ಟಿದ್ದೀರಿ. ತಾವು ನೋಟೀಸ್ ಕೊಟ್ಟಿದ್ದೀರಿ, ಮಾನ್ಯ ಶ್ರೀರಾಮ ರೆಡ್ಡಿಯವರು ಅದೇ ರೀತಿ ಬಿ.ಎಸ್. ಪಾಟೀಲ್ ಹಾಗೂ ಜಗದೀಶ್ ಶೆಟ್ಟರ್‌ರವರೂ ಕೊಟ್ಟಿದ್ದಾರೆ. ಪ್ರಾಸ್ತಾವಿಕವಾಗಿ ಹೇಳುವುದಾದರೆ 5-5 ನಿಮಿಷದಲ್ಲಿ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಡ್ಜರ್ನ್‌ಮೆಂಟ್ ಮೋಷನ್‌ಗೆ ತಾವು ಆಲೋ ಮಾಡುವುದಾದರೆ ಅದಕ್ಕೆ ನನ್ನ ಅಬ್ಜಕ್ಷನ್ ಇಲ್ಲ. ಕೋಲಾರದಲ್ಲಿ ಇತ್ತೀಚೆಗೆ ಆದಂಥ ಇನ್ಸಿಡೆಂಟ್‌ನ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಕೇಳಿದ್ದೇನೆ. ಅದಕ್ಕೆ ಕಾಲಾವಕಾಶ ಇಲ್ಲವೆಂದು ತಿಳಿದುಕೊಂಡು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತೇನೆಂದೂ ಹೇಳಿದ್ದೇನೆ.

ಅಧ್ಯಕ್ಷರು:- ಮೊದಲು ಇದನ್ನು ಮುಗಿಸಿ ಅನಂತರ ಅದನ್ನು ತೆಗೆದುಕೊಳ್ಳೋಣ. ಇನ್ನೂ ಕೆಲವು ಸದಸ್ಯರು ಮಾತಾನಾಡುವವರಿದ್ದಾರೆ.

ಶ್ರೀ ಜಿ.ವಿ. ರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ. . .

ಅಧ್ಯಕ್ಷರು:- ಅಡ್ಜರ್ನ್‌ಮೆಂಟ್ ಮೋಷನ್ ಆದ ಮೇಲೆಯೇ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹಾಗಾದರೆ ನಿನ್ನೆ ಸ್ವಲ್ಪಮಟ್ಟಿಗೆ ವ್ಯತ್ಯಾಸವಾಯಿತು.

ಅಧ್ಯಕ್ಷರು:- ಯಾವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿನ್ನೆಯ ಅಡ್ಜರ್ನ್‌ಮೆಂಟ್ ಮೋಷನ್ ಸ್ವಲ್ಪ ತಿರುಗು ಮುರುಗು ಆಯಿತು.

ಅಧ್ಯಕ್ಷರು:- ನಿನ್ನೆ ಅಡ್ಜರ್ನ್‌ಮೆಂಟ್ ಮೋಷನ್‌ನ್ನೇ ಮೊದಲು ತೆಗೆದುಕೊಂಡೆವಲ್ಲಾ.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಹಸ್ಮಿಯವರೂ ಒಂದು ನೋಟೀಸನ್ನು ಕೊಟ್ಟಿದ್ದಾರೆ, ಇವತ್ತು ಹೈಕೋರ್ಟ್ ಪೀಠವನ್ನು ಸ್ಥಾಪಿಸುವ ಬಗ್ಗೆ ಗುಲ್ಬರ್ಗಾ ಬಂದ್ ಇದೆ.

ಅಧ್ಯಕ್ಷರು:- ಅಡ್ಜರ್ನ್‌ಮೆಂಟ್ ಮೋಷನ್‌ನ ಬಗ್ಗೆ ಪ್ರಿಲಿಮಿನರಿ ಸಬ್ಮಿಷನ್ ಆಗಿ ಹೋಗಲಿ ಅನಂತರ ಅದನ್ನೆಲ್ಲಾ ತೆಗೆದುಕೊಳ್ಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಒಂದು ಪ್ರಮುಖವಾದ ವಿಚಾರವನ್ನು ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಜುಲ್ಫೀಕರ್ ಹಸ್ಮಿ:- ಮಾನ್ಯ ಅಧ್ಯಕ್ಷರೆ . . .

ಅಧ್ಯಕ್ಷರು:- ಹಸ್ಮಿಯವರೇ ನಿಲುವಳಿ ಸೂಚನೆಗೆ ಅವರು ನೋಟೀಸನ್ನು ಕಳುಹಿಸಿ ಕೊಟ್ಟಾಗ ಪ್ರಶ್ನೋತ್ತರ ವೇಳೆ ಆದಮೇಲೆ ಮೊದಲು ಅದನ್ನೇ ತೆಗೆದುಕೊಳ್ಳಬೇಕಾಗುತ್ತದೆ. ತಾವು ಹೇಳುತ್ತಿರುವ ವಿಚಾರ ಮತ್ತು ಮಾನ್ಯ ಖರ್ಗೆಯವರು ಹೇಳುತ್ತಿರುವ ವಿಚಾರ ಎಲ್ಲವನ್ನೂ ಕೂಡ ಇದರ ನಂತರ ತೆಗೆದುಕೊಳ್ಳುತ್ತೇನೆ. ಮೊದಲು ಇದನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಜವಾಗಿ ಹೇಳುವುದಾದರೆ ಇದಕ್ಕೆ ಮೊದಲು ಉತ್ತರವನ್ನು ಕೊಡಬೇಕಾಗುತ್ತದೆ. ಕಾಲಿಂಗ್ ಅಟೆನ್‌ಷನ್ ನೋಟೀಸ್ ತಮ್ಮ ಕಛೇರಿಯಲ್ಲಿ ಬಿದ್ದಿದೆ.

ಅಧ್ಯಕ್ಷರು:- ಯಾವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದರದ್ದೇ ನಾರಾಯಣಪುರದ ಬಗ್ಗೆ, ಮಾನ್ಯ ಧರ್ಮಸಿಂಗ್‌ರವರೂ, ನಾನೂ ಕೊಟ್ಟಿದ್ದೇವೆ. ಅನೇಕ ಸಾರಿ ರೂಲ್ಸ್ ಪ್ರಕಾರ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ನಿಂತಾಗ ಅದಕ್ಕೆ ಅವಕಾಶ ಆಗುವುದಿಲ್ಲ. ನಾವು ಇದಕ್ಕೆ ಜೀರೋ ಅವರ್‌ನ್ನು ಉಪಯೋಗಿಸಿಕೊಳ್ಳಬೇಕು, ಇಲ್ಲದಿದ್ದರೆ ಇದೇ ರೀತಿ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ತಂದು ಪ್ರಸ್ತಾಪ ಮಾಡಬೇಕು.

ಅಧ್ಯಕ್ಷರು:- ಈ ಸ್ಥಿತಿಯನ್ನು ಸೃಷ್ಟಿ ಮಾಡಿದವರೂ ತಾವೇ. ಜೀರೋ ಅವರ್‌ನಲ್ಲಿ ಪ್ರಮುಖವಾದ ಪ್ರಸ್ತಾಪ ಮಾಡಿ ಗಂಟೆಗಟ್ಟಲೆ ಟೈಂ ಆಗುತ್ತಿತ್ತು. ಆದ್ದರಿಂದ ಇದನ್ನು ಜೀರೋ ಅವರನಲ್ಲಿ ಮಾಡೋಣ ಎಂದು ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ತಾವು ನನ್ನನ್ನು ಕರೆದಿದ್ದೀರಿ. ನಾನು ಮುಗಿಸಿಬಿಡುತ್ತೇನೆ. ಅನಂತರ ಅವರದ್ದು ಏನಾದರೂ ಇದ್ದರೆ ಪ್ರಸ್ತಾಪ ಮಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಕೊನೇ ಪಕ್ಷ ನಮ್ಮದು ಬರುತ್ತದೆಂದು ಆದರೂ ಹೇಳಿ. ಕಳೆದ 3 ದಿನದ ಹಿಂದೆ ನೋಟೀಸ್ ಕೊಟ್ಟುಕಾಯತ್ತಿದ್ದೇವೆ. ತಮಗೆ ನೋಟೀಸ್ ಬಂದಿಲ್ಲವೆ?

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ತಾವೂ ಮತ್ತು ಹಸ್ಮಿಯವರು ಇಬ್ಬರೂ ಒಪ್ಪಿಕೊಳ್ಳುವುದಾದರೆ ಹೇಳುತ್ತೇನೆ. ಈಗ ಕೌನ್ಸಿಲ್‌ನಲ್ಲಿ ನನಗೆ ಸಂಬಂಧಪಟ್ಟಂತೆ 4 ಪ್ರಶ್ನೆಗಳಿವೆ. ನಾರಾಯಣಪುರದ ವಿಚಾರವನ್ನು ಅರ್ಧ ಗಂಟೆ ಕಾಲದ ಚರ್ಚೆಗೆ ಸಂಜೆ 5-6 ಗಂಟೆಗೆ ಹಾಕಿಕೊಂಡರೆ ನಾನು ಖಂಡಿತ ಅಟೆಂಡ್ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಆದ್ದರಿಂದಲೇ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ:- ನಾನು ಹೇಳುತ್ತಿರುವುದು ನಾರಾಯಣಪುರದ ಬಗ್ಗೆ. ಅದು ನಿಮ್ಮದಲ್ಲ. ನಿಮ್ಮದನ್ನು ತಾವು ಬೇಕಾದರೆ ಪ್ರಸ್ತಾಪ ಮಾಡಿ. ನಾರಾಯಣಪುರದ ವಿಚಾರಕ್ಕೆ ಸಂಬಂಧ ಪಟ್ಟಂತೆ ಸಂಜೆಗೆ ಅರ್ಧಗಂಟೆ ಕಾಲದ ಚರ್ಚೆಗೆ ಹಾಕಿಕೊಂಡರೆ ಅನುಕೂಲವಾಗುತ್ತದೆ. ನಾನೂ ಕೂಡ ಅಲ್ಲಿ ನನ್ನ ಪ್ರಶ್ನೆಗೆ ಉತ್ತರಗಳನ್ನು ಕೊಟ್ಟು ಬರಬಹುದು.

(3) ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ

ವಿಷಯ:- ಆಲಮಟ್ಟಿ ಜಲಾಶಯದಿಂದ ಕೆಲವು ಹಳ್ಳಿಗಳು ಮುಳುಗಡೆಯಾಗಿರುವುದರಿಂದ ಸಾರ್ವಜನಿಕರಿಗೆ ಸೌಲಭ್ಯ ಕಲ್ಪಿಸುವುದು.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ನಾನು ಒಂದು ಪ್ರಮುಖವಾದ ವಿಚಾರವನ್ನು ನಿಲುವಳಿ ಸೂಚನೆ ಪ್ರಕಾರ ಪ್ರಸ್ತಾಪ ಮಾಡಿದ್ದೇನೆ. ಅದು ಈ ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರದೇಶದಲ್ಲಿ ಮಹಾಪೂರ ಬಂದಿದ್ದು, ಆಲಮಟ್ಟಿ ಜಲಾಶಯದ ಎತ್ತರವನ್ನು ಸುಮಾರು 500-600 ಮಿಟರ್ ಎತ್ತರ ಕಟ್ಟಿರುವ ಪರಿಣಾಮವಾಗಿ ಇವತ್ತು ಬಾಗಲಕೋಟೆ ಮತ್ತು ಬೀಳಗಿ ತಾಲೂಕಿನ 21 ಗ್ರಾಮಗಳು ಪ್ರವಾಹದಿಂದಾಗಿ ಮುಳುಗಿ ಹೋಗಿವೆ.

11.20 ಎ ಎಂ

ನಾನು ಮೊನ್ನೆ ಶನಿವಾರ ಆಲ್ಲಿಯ ಅಧಿಕಾರಿಗಳ ಜೊತೆ ಈ ಪುನರ್ವಸತಿ ಗ್ರಾಮಗಳಿಗೆ ಹೋಗಿದ್ದೆ. ಮುಳುಗಡೆಯಾದಂಥ ಒಂದು ಪ್ರದೇಶಕ್ಕೆ ನಾನು ಭೇಟಿ ಕೊಟ್ಟು ಮನೆ ಮಠ ಕಳೆದು ಕೊಂಡಿರುವಂಥ, ನಿರಾಶ್ರಿತರಾಗಿರುವಂಥ ಜನರ ಆಕ್ರಂದನ ಗೋಳನ್ನು ನಾನು ಕೇಳಿಕೊಂಡು, ನೋಡಿಕೊಂಡು ಬಂದಿದ್ದೇನೆ. ನಿಮ್ಮ ಮಂತ್ರಿಗಳು ಸಹ ಹೆಲಿಕ್ಯಾಪ್ಟರ್‌ನಲ್ಲಿ ಹೋಗಿ ನೋಡಿಕೊಂಡು ಬಂದರು ಎಂದು ಕೇಳಿದ್ದೇನೆ. ಇವತ್ತು ಅಲ್ಲಿ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಆಯುಕ್ತರನ್ನು ಏನು ನೇಮಕ ಮಾಡಿದ್ದೀರಿ ಆ ಅಧಿಕಾರಿಗಳ ಜೊತೆ ಸಮಕ್ಷಮ ಚರ್ಚೆ ಮಾಡಿ ಅಧಿಕಾರಿಗಳ ಜೊತೆ ನಾನು ಹೋಗಿ ಬಂದಿದ್ದೇನೆ. ಇಲ್ಲಿ ಏನಾಗಿದೆ ಎಂದರೆ, ಹುಲಿ ಬಂತು ಹುಲಿ ಎಂದು ಹೇಳಿ ಹುಲಿ ಬರಲಿಲ್ಲವೆಂದಾಗ ಹೇಗೆ ಜನರು ಜಾಗೃತರಾಗಿರುವುದಿಲ್ಲವೋ ಹಾಗೆ ಪ್ರವಾಹ ಬರುತ್ತದೆಂದು ಹತ್ತಾರು ವರ್ಷಗಳಿಂದ ಹೇಳಿಕೊಂಡು ಬಂದು ಪ್ರವಾಹ ಬರಲಿಲ್ಲ, ಜನರು ಪುನರ್ವಸತಿ ಮಾಡಿದ್ದರೂ ಸಹ ಅಲ್ಲಿಗೆ ಹೋಗಲಿಲ್ಲ. ಇದರ ಪರಿಣಾಮ ಇವತ್ತು ಬಾಗಲಕೋಟೆ ಮತ್ತು ಬೀಳಗಿ ತಾಲ್ಲೂಕುಗಳಲ್ಲಿ 21 ಗ್ರಾಮಗಳು ಸಂಪೂರ್ಣ ನೀರಿನಿಂದ ಮುಳುಗಿ ಹೋಗಿವೆ. ಜನರು ನಿರಾಶ್ರಿತರಾಗಿ ಬೀದಿ ಪಾಲಾಗಿದ್ದಾರೆ. ಅವರ ಗೋಳನ್ನು ಆಕ್ರಂದನವನ್ನು ನೋಡುವುದಕ್ಕಾಗುವುದಿಲ್ಲ. ಅವರು ದುಸ್ಥಿತಿಯಲ್ಲಿದ್ದಾರೆ. ನಾನು ನಮ್ಮ ಸರ್ಕಾರದ ಬಗ್ಗೆ, ಅಧಿಕಾರಿಗಳ ಬಗ್ಗೆ ನನ್ನ ದೂರಿಲ್ಲ. ಏಕೆಂದರೆ ಅಲ್ಲಿರತಕ್ಕ ಅಧಿಕಾರಿಗಳು ಪುನರ್ವಸತಿ